ಮೈಸೂರ ಗಿಜಿತ.

ನಂ. 23. ಸರ್ಕಾರದಿಂದ ಪ್ರಾಯಿಷ್ ಆದ್ದು. ಸ್ನ 1884.

ಬೆಂಗಳೂರು, ಶನಿವಾರ, ಜೂನ್ ತಾ|| 7, ಸ್ನ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟಿಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸೆಕ್ರಿಟೆರಿಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟುವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ್ಮ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಟಗಳು, 1884ನೇ ಇಸವಿಯ ಮೈಸೂರು ಚೀಫ್ ಕೋರ್ಟು ರೆಗ್ಯೂಲೇಷ್ಟ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 4ನೇ ಜೂನ್ 1884.

ಸ್ನ 1884ನೇ ಯಿಸವಿ ಜೂನ್ 4ನೇ ತಾರೀಖಾದ ಈದಿವಸ ಶ್ರೀಮ್ಮ ಮಹಾರಾಜರವರಿಗೆ ಕುಮಾರರು ಜನಿಸಿದ ವೃತ್ತಾಂತವನ್ನು ಸಕಲ ಜನಗಳ ತಿಳುವಳಿಕೆಯ ಬಗ್ಯೆ ಪ್ರಕಟಿಸುವದರಲ್ಲಿ ಶ್ರೀಮ್ಮ ಮೈಸೂರು ಮಹಾರಾಜಾ ಸರ್ಕಾರದವರು ಬಹಳ ಉತ್ಸಾಹವುಳ್ಳವರಾಗಿರುತ್ತಾರೆ. ಯಿಂತಾ ಅತ್ಯಂತ ಶುಭಕರವಾದ ಸಂದರ್ಭದ ಗೌರವಾರ್ಥ ಮೈಸೂರು ಶೀಮೆಯೊಳು ಈ ತಿಂಗಳ 14ನೇ ತಾರೀಖು ಸರ್ವತ್ರ ಸಂಪೂರ್ಣ ರಜಾ ದಿವಸದಂತೆ ಆಚರಿಸತಕ್ಕದ್ದೆಂದು ಹುಕ್ಕುಂ ಮಾಡಿರುತ್ತಾರೆ.

ತಾರೀಖು 24ನೇ ಏಪ್ರೆಲ್ 1884.

ನಂ. 12.—ಇದರಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗ ವ ಕಡೂರು ಡಿಸ್ಟ್ರಿಕ್ಟು ವುತ್ಪತ್ತೀ ಬಾಬತು ಇದರಜೀ ಕಂಡ ನಾ ಟೂಗಳು ಅಸಿಸ್ಟೆಂಟ್ ಕ೯ಸರ್‌ವೇಟರವರಿಂದ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಆಯಾ ತಾರೀಖಿನೊಳಗೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು :—

ಹರಾಜ್ ನಡಿಯತಕ್ಕ ಸ್ಥಳ.		ಹರಾಜಿನ ತಾರೀಖು.	ಪ್ರಗದ ದಿಮ್ಮಿಗಳು.	ಕಾಡುಮರದ ದಿಮ್ಮಿಗಳು.	ತೆಗ ಮತ್ತು ಕಾಡು ಮರದ ಕೊಡಪಗಳು.	ಜುಮ್ಲೆ
*	*	*	*	*	*	*
*	*	*	*	*	*	*
*	*	*	*	*	*	*
ಚನ್ನಗಿರಿ	(ಚನ್ನಗಿರಿ ತಾಲ್ಲೂಕು)	6ನೇ ಜೂ೯ 1884.	50	0	400	450
ಕುಂಟಿನಮಡು	(ತರೀಕೆರೆ ತಾಲ್ಲೂಕು)	11 ಡಿಟೋ	0	0	100	100
ತರೀಕೆರೆ	ಡಿಟೋ	13 ಡಿಟೋ	50	50	100	200
ಲಕ್ಕವಳ್ಳಿ	ಡಿಟೋ	16 ಡಿಟೋ	600	600	0	1200
ಕಣಬೂರು	(ಕೊಪ್ಪ ತಾಲ್ಲೂಕು)	20 ಡಿಟೋ	200	300	0	500
ಆಯನೂರು	(ಶಿವಮೊಗ್ಗ ತಾಲ್ಲೂಕು)	23 ಡಿಟೋ	50	150	100	300
ಶಿವಮೊಗ್ಗ	ಡಿಟೋ	25 ಡಿಟೋ	150	350	600	1100

ಹರಾಜಿನ ಷರತ್ತುಗಳು.—ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟ 1873ನೇ ಇಸವಿ ಜೂ೯ 12ನೇ ಮತ್ತು ಂ 20ನೇ ನಂಬರ್ ಇಸ್ತಿಹಾರ್‌ನಾಮೆ ಪ್ರಕಾರ ಇರುವದು ಮತ್ತು ಹರಾಜ್ ಕಾಲದಲ್ಲಿ ಓದಲ್ಪಡುವದು.

ತಾರೀಖು 12ನೇ ಮೇ 1884.

ನಂ. 25—ತಪ್ಪು ದುರಸ್ತು :—ಸ೯ 1883ನೇ ಇಸವೀ ನವೆಂಬರ್ 16ನೇ ಮತ್ತು ಂ 274ನೇ ನಂಬರ್‌ಉಳ್ಳ ದೀವಾನರವರ ಇಸ್ತಿ ಹಾರ್ ನಾಮೆಯ 7ನೇ ಕಲಂನಲ್ಲಿ ಗಂಗೇನಹಳ್ಳಿ ಯೆಂಬದಕ್ಕೆ ಬದಲಾಗಿ ಗಂಗದಹಳ್ಳಿ ಯೆಂದು ಓದಿಕೊಳ್ಳತಕ್ಕದ್ದು.

ತಾರೀಖು 27ನೇ ಮೇ 1884.

ನಂ. 45.—ಹಾಸನದ ಮುನ್‌ಸೀಫ್ ಸಿ. ವೆಂಕಟರಾಯರಿಗೆ ಮಾಡಿ ಮಜಕೂರು 28ನೇ ತಾರೀಖು ಲಗಾಯತು ಮೆಡಿಕಲ್ ಸರ್ಟಿ ಫಿಕೇಟ್ ಮೇಲೆ 2 ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ಮೈಸೂರು ಚೀಫ್ ಕೋರ್ಟಿನ ಆಕ್ಟಿಂಗ್ ಸಿವಿಲ್ ಕ್ಲರ್ಕ್ ವ ಇಂಟರ್‌ಪ್ರಿಟರ್ ಬುರ್ಡ ಪರೀಕ್ಷೆ ಯವರಿಗೆ, ಸಿ. ವೆಂಕಟರಾಯರು ರಜಾದ ಮೇಲಿರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಹಾಸನದ ಮುನ್‌ಸಿಫರಾಗಿ ಆಕ್ಟಿಂಗ್ ತರೀಕೆ ಕೆಲಸ ನೋಡುವಂತೆ ಮೊ ಕರರ್.

ತಾರೀಖು 28ನೇ ಮೇ 1884.

ನಂ. 46.—ಫಾರೆಸ್ಟ್ ಸಬ್ ಅ॥ ಕ೯ಸರ್‌ವೇಟರ್ ಮೆ॥ ಜೆ. ಸ್ಟೀವೆ೯ಸ್‌ಯವರು, 1884ನೇ ಇಸವಿ ಮೇ 21ನೇ ಮುಂಜಾನೆ ಪೂರ್ವಾಹ್ನದಲ್ಲಿ ಹಾಸನದ ಸಬ್ ಅ॥ ಕ೯ಸರ್‌ವೇಟರ್ ಆಫೀಸ್ ಚಾರ್ಜ್‌ನ್ನು, ಆಕ್ಟಿಂಗ್ ಸಬ್ ಅ॥ ಕ೯ಸರವೇಟರ್ ಮೆ॥ ಪ್ರಹ್ಲಾದರಾಯರಿಗೆ ಒಪ್ಪಿಸಿರುತ್ತಾರೆ.

ನಂ 47.—ಇದರಡೀ ಕಂಡ 3ನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟರು, ಪರೀಕ್ಷೆ ಮಾಡಿದ್ದರಲ್ಲಿ ಲಾಯಖಾಗಿ ಕಾಣಬಂದದ್ದರಿಂದ 1884ನೇ ಮೇ 17ರ ಲಾಗಾಯತು 2ನೇ ಕ್ಲಾಸಿಗೆ ಬಡತಿ ಮಾಡಲ್ಪಟ್ಟಿರುತ್ತಾರೆ.

3ನೇ ಕ್ಲಾಸ್ ಆಸ್ಪಿಟಿಲ್ ಅ॥ ವಿ. ವೇಲಾಯುಧ ಮೊದಲಿಯಾರ್.

ತಾರೀಖು 30ನೇ ಮೇ 1884.

ನಂ. 48.—(1) ಫೈಂಬ್‌ರಾಕ್ಸ್ ಸಬ್ ಡಿವೀಜನ್ನಿಗೆ ಕೇರಿದ ತಾಲ್ಲೂಕುಗಳಲ್ಲಿಯೂ (2) ಮೈಸೂರು ಡಿಸ್ಟ್ರಿಕ್ಟಿನ ಇತರ ತಾಲ್ಲೂಕು ಗಳಲ್ಲಿಯೂ 1884ನೇ ಜುಲೈ 1ನೇ ಮುಕ್ತಂ ಲಾಗಾಯತು 1885ನೇ ಮಾರ್ಚಿ 31ರವರಿಗೆ ಯಿರಡುವಿವಸಗಳೂ ಕೇರಿ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ವಳಪಟ್ಟು ಗಾಂಜಾ ವ ಅದರ ತಯಾರಿ ಪದಾರ್ಥ ಇವುಗಳ ವಟ್ಟು ಬಿಕ್ರಿಯ ವಿಶೇಷ ಸ್ವಾತಂತ್ರ್ಯದ ಬ್ಯೆ ಇದರಿಂದ ಜೇರಬೇರೆ ದರಖಾಸ್ತುಗಳು ಕೋರಲ್ಪಡುತ್ತೆ.

2. ಪ್ರತಿ ದರಖಾಸ್ತುದಾರನೂ, ಗವರ್ಮೆಂಟಿಗೆ ಎಷ್ಟರ ಮೊಬಲಗಿಗೆ ಕಾಲ್ ಮಾಡುತ್ತಾನೋ ಅಂತಾ ಕಮ್ಮೀ ಹುಟ್ಟುವಳ್ಳೇ ಯನ್ನು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸತಕ್ಕದ್ದಲ್ಲದೆ, ನಗದು 50 ರೂಪಾಯಿಗಳ ಶೇವಣೀ ಸಹಿತ ಲಿಫಾಫೆಯೊಳಗೆ ಹಾಕಿ ಬಂದ್ ಮಾಡಿ, "ಗಾಂಜಾವನ್ನು ಅದರಿಂದ ತಯಾರಾದ ಪದಾರ್ಥವನ್ನು ಫೈಂಬ್‌ರಾಕ್ಸ್ ಸಬ್ ಡಿವೀಜನ್ನಿಗೆ ಕೇರಿದ ತಾಲ್ಲೂಕುಗಳಲ್ಲಿ" ಅಥವಾ ಸಂದರ್ಭಾನುಸಾರ "ಫೈಂಬ್‌ರಾಕ್ಸ್ ಸಬ್ ಡಿವೀಜನ್ನಿಗೆ ಕೇರಿದ ತಾಲ್ಲೂಕುಗಳು ವಿನಹಾ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬಿಕ್ರೀ ಮಾಡುವ ವಿಶೇಷ ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಎಂದು ವಿಳಾಸ ಬರೆದು ಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸ೯ 1884ನೇ ಇಸವಿ ಜೂ೯ 20ನೇ ಮುಕ್ತಮಿನ ಪೂರ್ವಾನ್ಹದಲ್ಲಾಗಲಿ ತತ್ಪೂರ್ವದಲ್ಲಾಗಲಿ ಮೈಸೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷ್ಣರವರ ಆಫೀಸಿನಲ್ಲಿ ಒಪ್ಪಿಸಲ್ಪಡತಕ್ಕದ್ದು, ಆಗ ಅವುಗಳು ದರಖಾಸ್ತುದಾರ್ರ ರೂಬರೂ ಡೆಪ್ಯೂಟಿ ಕಮ್ಮಿಷನರವರಿಂದಲೂ, ಫೈಂಬ್‌ರಾಕ್ಸ್ ಸಬ್ ಡಿವೀಜ್ ಈ ಬಾಜೂ ಆಫೀಸರರಿಂದಲೂ ಖುಲ್ಲಾ ಮಾಡಲ್ಪಡುವವು. ಗವರ್ಮೆಂಟಿಗೆ ವಿಘಾರನ್ ಮಾಡುವ ಬಗ್ಯೆ ಯಾರ ದರಖಾಸ್ತು ಚುನಾಯಿಸಲ್ಪಡುತ್ತೊ ಆ ದರಖಾಸ್ತುದಾರನು ತಾನು ವಪ್ಪಿಕೊಂಡ ಇಜಾರೇ ಮೊಬಲಗು ಪೈಕೀ ಹನ್ನೆರಡರಲ್ಲಿ ವಂದು ಭಾಗಕ್ಕೆ ಸಮನಾದ ಮೊಬಲಗು (ಅಥವಾ ಬಂದು ತಿಂಗಳ ಖಿಸ್ತು ಮೊಬಲಗು) ನಗದಾಗಿಯಾಗಲಿ ಗವರ್ಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಕೂಡ್ಲೇ ಡಿಪಾಜಿಟ್ ಕಟ್ಟತಕ್ಕದ್ದು: ಇದಕ್ಕೆ ತಪ್ಪಿದರೆ, ದರಖಾಸ್ತಿನ ಸಂಗಡ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

4. ಗವರ್ಮೆಂಟಿನ ತೀರ್ಮಾನವು ತಿಳಿಸಲ್ಪಟ್ಟ್ಯಾಗ, ಯಾರ ದರಖಾಸ್ತು ತಿರಸ್ಕರಿಸಲ್ಪಟ್ಟಿವ್ಯೋ ಅಂತಾ ದರಖಾಸ್ತುದಾರರಿಂದ ಹಾಜರ್ಮಾಡಲ್ಪಟ್ಟ ಡಿಪಾಜಿಟ್ ಮೊಬಲಗುಗಳು ಅವರುಗಳು ಕೇಳಿದಾಗ ವಾಪಸು ಮಾಡಲ್ಪಡುವವು. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸುವ ಅಧಿಕಾರವನ್ನು ಗವರ್ಮೆಂಟಿನವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್ಮಾಡಲ್ಪಡುವದೋ ಅಂತಾ ದರಖಾಸ್ತುದಾರನು ತನಿಗೆ ಗವರ್ಮೆಂಟಿನವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ 8 ದಿವಸಗಳ ವಳಗಾಗಿ ನಗದಾಗಿಯಾಗಲೀ ಇಂಡಾರನ್ ಮಾಡಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕವಾಗಿಯಾಗಲೀ ಬಂದು ಮೊಬಲಗು ಡೆಪ್ಯೂಟಿ ಕಮ್ಮಿಷನರ್ ಯಾ ಸಂದರ್ಭಾನುಸಾರ ಸಬ್ ಡಿವೀಜ್ ಆಫೀಸರಲ್ಲಿ ಶೇವಣೀ ಇಡತಕ್ಕದ್ದು, ಸದರೀ ಮೊಬಲಗೂ ಮತ್ತು 3ನೇ ಕಲಂ ಅನುಗುಣನಾಗಿ ಮೊದಲೇ ಇಡಲ್ಪಟ್ಟ ಶೇವಣೀ ಮೊಬಲಗು ಸುದಾ ಕೇರಿ, ವಪ್ಪಿಕೊಂಡ ಇಜಾರೇ ಮೊಬಲಗಿನ ನಾಲ್ಕರಲ್ಲಿ ಬಂದು ಭಾಗಕ್ಕೆ ಸಮನಾಗಿರತಕ್ಕದ್ದು: ಮತ್ತು ಇದರಲ್ಲಿ ಮುಂದೆ ವಿವರಿಸಲ್ಪಟ್ಟ ಷರತ್ತುಗಳಿಗೆ ಬದ್ಧನಾಗಿ ನಡಕೊಳ್ಳುವ ಬಗ್ಯೆ ಮಾಮೂಲ್ ನಮೂನೆಯಲ್ಲಿ ತಕ್ಕ ಛಾಪಾ ಕಾಗದದಮೇಲೆ ಬಂದು ಕರಾರು ಬರೆದು ಕೊಡತಕ್ಕದ್ದು; ಮತ್ತು ಇಜಾರೇದಾರನು ಸದರೀ ಕರಾರಿಗೆ ರುಜೂ ಮಾಡುವದಕ್ಕಾಗಲಿ, ಅವಶ್ಯಕವಾದ ಶೇವಣೀ ಕಟ್ಟುವದಕ್ಕಾಗಲಿ, ತಪ್ಪಿದರೆ ಮೊದಲೇ ಹಾಜರ್ಮಾಡಿದ ಡಿಪಾಜಿಟ್ ಮೊಬಲಗುಗಳು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಟ್ಟು ಇಜಾರೆಯು ಅನ್ಯಥಾ ವಿಲು ಮಾಡಲ್ಪಡುವದು.

6. ಇಜಾರೆದಾರನಿಂದ ಲೈಸೆನ್ಸ್ ಹೊಂದಿದ ಪುರೋಖ್ತುದಾರರಿಗೆ ಮಾಡಲ್ಪಡುವ ಗಾಂಜಾವಿನ ವ ಅದರ ತಯಾರೀ ಬಾಬತ್ತು ಪದಾರ್ಥಗಳ ಪುರೋಖ್ತುಗಳು ಕಾಲ್ ಮಾಡಿಕೊಂಡ ಮೊಬಲಗಿಗೆ ಜಾಸ್ತಿಯಾದರೆ, ಹಾಗೆ ಜಾಸ್ತಿಯಾದ ಮೊಬಲಗಿನ ಶೇಕಡಾ 25ನ್ನು ಇಜಾರೆ ಕಾಲಕ್ಕೆ ಸಲ್ಲತಕ್ಕ ಅಬ್ಕೈರ್ ಖಿಸ್ತಿನ ಸಂಗಡ ಕ್ರಮಪ್ರಕಾರ ಗವರ್ಮೆಂಟಿಗೆ ಪಾವತೀ ಮಾಡತಕ್ಕದ್ದು.

ಷರತ್ತುಗಳು.

I. ಇಜಾರೆಯು ಡೆಪ್ಯೂಟಿ ಕಮ್ಮಿಷನರವರ ಯಾ ಸಂದರ್ಭಾನುಸಾರ ಸಬ್ ಡಿವಿಜ್ ಆಫೀಸರರ ಮುಂಜೂರಾತೀ ವಿನಾ ವರ್ಗ ಮಾಡಲ್ಪಡತಕ್ಕದ್ದಲ್ಲಾ.

II. ಈ ಇಜಾರೆ ಕೆಲಸಗಳಿಗೋಸ್ಕರ ಗವರ್ಮೆಂಟಿನವರು, ಇಜಾರೇ ಕಾಲದಲ್ಲಿ ಇಜಾರೇದಾರನಿಂದ ಮೊಕರರ್ ಮಾಡಲ್ಪಟ್ಟ ಯಾ ಅಂಗೀಕರಿಸಲ್ಪಟ್ಟ ಯಾವ ಪ್ರತಿನಿಧಿಯಾದ ಮುತಾಲೀಕನನ್ನಾಗಲಿ ಹಿಸ್ಸೇದಾರನನ್ನಾಗಲಿ ಅಂಗೀಕರಿಸಲಿಕ್ಕೆ, ಅಂಥಾ ಪ್ರತಿನಿಧಿಯಾದ ಮುತಾಲೀಕನು ಯಾ ಹಿಸ್ಸೇದಾರನು ತಾತ್ಕಾಲಿಕ ಡೆಪ್ಯುಟಿ ಕಮ್ಮಿಷನರಿಂದ ಯಾ ಸಂದರ್ಭಾನುಸಾರ ಸಬ್ ಡಿವಿಜ್ ಆಫೀಸರರಿಂದ ಮೊದಲು ಮಂಜೂರ್ಮಾಡಲ್ಪಡದೇ ಯಿದ್ದರೆ, ಗವರ್ಮೆಂಟಿನವರು ನಿರಾಕರಿಸಬಹುದು.

III. ಕಾಲ್ ಮಾಡಲ್ಪಟ್ಟ ಕಮ್ಮಿಯಾದ ಇಜಾರೆ ಬೊಬಲಗು ಮತ್ತು ಅದರ ಮೇಲೆ ರೂಪಾಯಿ ವಂದಕ್ಕೆ ವಂದಾಣಿ ಪ್ರಕಾರ ಆಗುವ ಲೋಕಲ್‌ಸೆಸ್ ಬೊಬಲಗು ಸುದಾ, ಕಂಟ್ರಾಕ್ಟುದಾರನು, ಮೈಸೂರು ಡಿಸ್ಟ್ರಿಕ್ಟು ಟ್ರೆಜರಿಯಲ್ಲಿ ಮಾಹೆಯಾನಾ ಸಮನಾದ ಖಿಸ್ತು ಪ್ರಕಾರ ಪ್ರತಿ ಮಾಹೆಯ 20ನೇ ತಾರೀಖಿನ ವಳಗಾಗಿ ಪಾವತೀ ಮಾಡತಕ್ಕದ್ದು. ಇಜಾರೆ ಕಾಲಕ್ಕೆ ಪಾವತಿಯಾಗಬೇಕಾದ ಆಖೈರ್ ಖಿಸ್ತಿನ ಸಂಗಡ ಜಾಸ್ತೀ ಪುರೋಖ್ತಿನ ದೆಸೆಯಿಂದ ಕಾಲ್ ಮಾಡಿಕೊಂಡ ಬೊಬಲಗಿಗಿಂತಲೂ ಹೆಚ್ಚಾಗಿ ಆಗುವ ಹುಟ್ಟುವಳೀ ಮೇಲೆ ಸೇಕಡಾ 25ರಂತೆ ಆಗುವ ಬೊಬಲಗುಗಳನ್ನು ಪಾವತೀ ಮಾಡತಕ್ಕದ್ದು. ಮೇಲೆ ಹೇಳಿದ ಖಿಸ್ತು ವೈಕಿ ಯಾವದನ್ನಾಗಲಿ ಪಾವತಿ ಮಾಡದೇ ತಪ್ಪುವ ಪಕ್ಷಕ್ಕೆ, ಡಿಪಾಜಿಟ್ ದಂಡವಾಗಿ ತೆಗದುಕೊಳ್ಳಲ್ಪಟ್ಟಿತೆಂದು ತಿಳಿಸುವದಕ್ಕೂ, ಕಂಟ್ರಾಕ್ಟುದಾರನನ್ನು ಲಾಕಸಾನಿಗೆ ಗುರಿಮಾಡಿ ಇಜಾರೆಯನ್ನು ಅಮಾನಿ ಕೆಳಗೆ ತೆಗದುಕೊಳ್ಳುವಂತೆ ಹುಕ್ಕುಂ ಮಾಡುವದಕ್ಕೂ, ಅಥವಾ ಇಜಾರೇ ತಪ್ಪಿಸಿರುತ್ತೆಂದು ತಿಳಿಸುವದಕ್ಕೂ, ಕಂಟ್ರಾಕ್ಟುದಾರನ ಅನಾಯಕ್ಕೂ ನಷ್ಟಕ್ಕೂ ವಳಪಟ್ಟು ಇಜಾರೆಯನ್ನು ಮರಳಿ ವಿಕ್ರಯಿಸುವದಕ್ಕೂ, ಮತ್ತು ಯಲ್ಲ ಬಾಕಿಗಳನ್ನೂ ಸಾಲೀಯಾನಾ 6ರ ಪ್ರಕಾರ ಬಡ್ಡೀ ಸಹಿತವಾಗಿ ಅವನ ಸ್ಥಾವರ ಜಂಗಮ ಸ್ವತ್ತಿನ ಜಪ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ತಾತ್ಕಾಲಿಕ ಡೆಪ್ಯುಟಿ ಕಮ್ಮಿಷನರಿಗೆ ಯಾ ಸಂದರ್ಭಾನುಸಾರ ಸಬ್ ಡಿವಿಜ್ ಆಫೀಸರರಿಗೆ ನ್ಯಾಯವಾಗಿರತಕ್ಕದ್ದು.

IV. ಡೆಪ್ಯುಟಿ ಕಮ್ಮಿಷನರವರಿಂದ ಯಾ ಸಂದರ್ಭಾನುಸಾರ ಸಬ್ ಡಿವಿಜ್ ಆಫೀಸರರಿಂದ ಗಾಂಜಾ ವ ಅದರಿಂದ ತಯಾರ್ ಮಾಡಲ್ಪಟ್ಟ ವಸ್ತುಗಳನ್ನು ವಿಕ್ರಯಿಸತಕ್ಕ ಅಂಗಡಿಗಳ ಸಂಖ್ಯೆಯು, ಮತ್ತು ಅವು ಇಡಲ್ಪಡಬೇಕಾದ ಸ್ಥಳಗಳು ಸುದಾ ಗೊತ್ತು ಮಾಡಲ್ಪಡತಕ್ಕದ್ದು, ಮತ್ತು ಕಂಟ್ರಾಕ್ಟುದಾರನು ಹಾಗೆ ಗೊತ್ತು ಮಾಡಲ್ಪಟ್ಟ ಸ್ಥಳಗಳಲ್ಲಿ ಮಾತ್ರವೇ ಗಾಂಜಾ ವ ಅದರ ತಯಾರೀಗಳನ್ನು ಹೊರುವದಕ್ಕೆ ವಪ್ಪತಕ್ಕದ್ದು; ಅಂಗಡಿಗಳ ಸ್ಥಳಗಳ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಆವಶ್ಯಕವಾದ ಯಾವ ಬದಲಾವಣೆಯನ್ನಾದರೂ ಆಗಿಂದಾಗ್ಗೆ ಮಾಡುವದಕ್ಕೂ, ಯಾವ ಅಂಗಡಿಯನ್ನಾದರೂ ಕಂಟ್ರಾಕ್ಟುದಾರನು ಈಡು ಬೊಬಲಗು ಕೇಳುವದಕ್ಕೆ ಹಕ್ಕಿಲ್ಲದೇನೇ ಈ ಇಸ್ತಿಹಾರ್ ನಂಬೆಯ 9ನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟ ಷರತ್ತು ರೀತಿಯಾಗಿಯೂ, ಮತ್ತು ಅದನ್ನು ಅನುಸರಿಸಿ ಮುಚ್ಚುವದಕ್ಕೂ, ಡೆ ಪ್ಯುಟಿ ಕಮ್ಮಿಷನರವರು ಮತ್ತು ಸಬ್ ಡಿವಿಜ್ ಆಫೀಸರರು ಸ್ವತಂತ್ರರಾಗಿರುತ್ತಾರೆ.

V. ಹಾಲಿ ಇರುವ ಚಿಲ್ಲರೆ ಪುರೋಖ್ತುದಾರರನ್ನ ಕಾಯಂ ಮಾಡುವಣ, ಹೊಸ ಪುರೋಖ್ತುದಾರರನ್ನ ಮೊಕರರ್ ಮಾಡುವಣ, ಲೈಸೆನ್ಸುಗಳನ್ನು ರದ್ದು ಮಾಡುವಣ, ಇವುಗಳು ಜಾರೀಲಿ ಇರುವ ರೂಲ್ಸ್ ಅನುಸರಿಸಿ ಡೆಪ್ಯುಟಿ ಕಮ್ಮಿಷನರವರಿಗೆ ಯಾ ಸಂದರ್ಭಾನುಸಾರ ಸಬ್ ಡಿವಿಜ್ ಆಫೀಸರರಿಗೆ ಕೇರಿ ಇರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾ ಸಂದರ್ಭಾನುಸಾರ ಸಬ್ ಡಿವಿಜ್ ಆಫೀಸರರು ವಿಧಿಸಲ್ಪಟ್ಟ ಸಮೂನೆಗಳಲ್ಲಿ ಲೈಸೆನ್ಸುಗಳನ್ನು ಇತರ ಪದಾರ್ಥಗಳ ವಿಷಯದಲ್ಲಿ ಹ್ಯಾಗೋ ಹಾಗೆ ಚಿಲ್ಲರೆ ಪುರೋಖ್ತುದಾರರಿಗೆ ಪರಭಾರೆಯಾಗಿ ಕೊಡತಕ್ಕದ್ದು.

VI. ಇಜಾರೇದಾರನು ಗಾಂಜಾವನ್ನು ವ ಅದರಿಂದ ತಯಾರಾದ ಪದಾರ್ಥಗಳನ್ನು ಅಂಥಾ ಲೈಸೆನ್ಸು ಹೊಂದಿದ ಪುರೋಖ್ತುದಾರರಿಗೆ ಮಾತ್ರವೇ ವಿಕ್ರಯಿಸತಕ್ಕದ್ದೇ ಹೊರ್ತು ಚಿಲ್ಲರೇ ಪುರೋಖ್ತುದಾರರಿಗೆ ಯಾವ ವಿಧದಿಂದಲೂ ಬಾಧಕ ಪಡಿಸಕೂಡದು.

VII. ವಿಕ್ರಯಿಸಲ್ಪಡತಕ್ಕ ಗಾಂಜಾ ವಳ್ಳೀದಾಗಿ ಯಿರಬೇಕು, ಪರಿಕೆಯಾದ್ದಾಗಿರಕೂಡದು, ಮತ್ತು ಇಜಾರೇದಾರನು ಯಾವಾಗಲೂ ಅಧಮ ಪಕ್ಷ ಬಂದು ತಿಂಗಳಿಗೆ ಆಗುವಷ್ಟು ಗಾಂಜಾ ಸರಕನ್ನು ತನ್ನ ವಶದಲ್ಲಿ ಇಟ್ಟುಕೊಳ್ಳತಕ್ಕದ್ದು.

VIII. ಇಜಾರೇದಾರನಿಂದ ಚಿಲ್ಲರೇ ಪುರೋಖ್ತುದಾರಗೆ ಗಾಂಜಾ ಯಾವ ಖರೀದಿಗೆ ವಿಕ್ರಯಿಸಲ್ಪಡತಕ್ಕದ್ದೋ ಅಂತಾ ಖರೀದಿಯು 24 ತೊಲೆಗಳುಳ್ಳ ಬಂದು ಕೇರಿಗೆ 8 ಆಣೇ ಮೇರೆ ನಿಷ್ಕರ್ಷೆ ಮಾಡಲ್ಪಡತಕ್ಕದ್ದು. ಮತ್ತು ಚಿಲ್ಲರೇ ಪುರೋಖ್ತುದಾರನು ಕೇರು ವಂದಕ್ಕೆ ಹನ್ನೊಂದು ಆಣೆಮೇರೆ ಜನಗಳಿಗೆ ಪುರೋಖ್ತು ಮಾಡತಕ್ಕದ್ದು. ಮಾಜುವು ಇಜಾರೇದಾರನಿಂದ ಕೇರು ಒಂದಕ್ಕೆ 3 ಆಣೇ ಮೇರೆಗೂ, ಚಿಲ್ಲರೇ ಪುರೋಖ್ತುದಾರನಿಂದ 5 ಆಣೇ ಮೇರೆಗೂ ವಿಕ್ರಯಿಸಲ್ಪಡತಕ್ಕದ್ದು. ಗಾಂಜಾ ಮತ್ತು ಅದರ ತಯಾರೀ ಬಾಬತು ಪದಾರ್ಥಗಳೆ ಪುರೋಖ್ತುಗಳಿಗೆ, ಆಧಾರವಾಗಿ ವಿಧಿಸಲ್ಪಟ್ಟ ನಮೂನೆಯಲ್ಲಿ ಇಜಾರೆದಾರನಿಂದಾಗಲಿ, ಅಧಿಕಾರ ಕೊಡಲ್ಪಟ್ಟ ಅವನ ಮುತಾಲೀಕನಿಂದಾಗಲಿ ರುಜುಮಾಡಲ್ಪಟ್ಟ ಪ್ಯಾಸ್ ಯೆಂಬ ರಹದಾರಿಯು ಕೊಡಲ್ಪಡತಕ್ಕದ್ದು. ಚಿಲ್ಲರೇ ಪುರೋಖ್ತುದಾರನು ಒಬ್ಬ ಮನುಷ್ಯನಿಗೆ, ಒಂದೇದಿನದಲ್ಲಿ, ಒಬ್ಬ ಮಾಜಿಸ್ಟ್ರೇಟರಿಂದ ಕೊಡಲ್ಪಟ್ಟರಹದಾರೀಗಳ ಮೇಲೆ ವೈದ್ಯವಿಷಯಗಳಿಗಾಗಿ ವಿನಾ, ಅನ್ಯಥಾ ನಾಲ್ಕು ತೊಲೆ ಗಾಂಜಾಕಿಂತ ಹೆಚ್ಚಾಗಿ ಮಾರಕೂಡದು.

IX. ಡೆಪ್ಯುಟಿ ಕಮ್ಮಿಷನರು ಯಾ ಸಂದರ್ಭಾನುಸಾರ ಸಬ್ ಡಿವೀರ್ಜ ಆಫೀಸರರು ಯಾವದಾದರೊಂದು ಅಂಗಡಿಯನ್ನು ಯಾ ಅಂಗಡಿಗಳನ್ನು ಮಿಲಿಟೇರಿ ಅಧಿಕಾರಿಗಳ ಯಾ ಮಾಜಿಸ್ಟ್ರೇಟುಗಳ ಕೋರಿಕೆಮೇಲೆ, ಹಂಗಾಮಿಯಾಗಿ, ಯಾ ಕಾಯವಾಗಿ, ಮುಚ್ಚುವ

ದಕ್ಕೆ ಅಧಿಕಾರವನ್ನು ಪಡೆದಿರತಕ್ಕದ್ದು; ಮತ್ತು ಇಜಾರೇದಾರನು, ಸದರೀ ಬಗ್ಗೆ ಯಾವ ಈಡು ದ್ರವ್ಯಕ್ಕೂ ಹಕ್ಕು ಉಂಟಾಗಿರತಕ್ಕದಲ್ಲವು. ಆದರೆ ಡೆಪ್ಯೂಟಿ ಕಮ್ಮಿಷನರವರ ಯಾ ಸಂದರ್ಭಾನುಸಾರ ಸಬ ಡಿವೀಜ್ ಆಫೀಸರರ ಮಂಜೂರಾತೀನಿೇ ಹಾಗೆ ಕಡಮೆಮಾಡಲ್ಪಟ್ಟ ಸಂಖ್ಯೆಯು ಜನಗಳ ಗಿರಾಕಿಗೆ ಬೇಕಾಗಿ ಇದ್ದ ಪಕ್ಷಕ್ಕೆ ಯುಕ್ತಗಳಾದ ಇತರ ಸ್ಥಳಗಳಲ್ಲಿ ಪುನ್ಹ ಸ್ಥಾಪಿಸಲ್ಪಡಬಹುದು. ಪರಂತು, ಹಾಲಿ ಯಿರುವ ದುಕಾ೯ಗಳ ಸಂಖ್ಯೆ, ಸ೯ 1883—84ನೇ ಇಸವೀಯಲ್ಲಿ ಲೈಸೆನ್ಸ್ ಕೊಡಲ್ಪಟ್ಟ ದುಕಾ೯ಗಳಿಗೆ ಹೆಚ್ಚಿದರೆ, ಅಂತಾ ಅಂಗಡಿಗಳನ್ನು ಪುನಃ ಇಡುವದಕ್ಕೆ ಸದರೀ ಆಫೀಸರರ ಯಿಚ್ಛಾ್ಯರೀ ಮೇಲೆ ನಿರಾಕರಿಸತಕ್ಕದ್ದು; ಮತ್ತು ಇಜಾರೇದಾರನು ಹಾಗೆ ಸ್ಥಾಪಿಸಲ್ಪಟ್ಟ, ಸಂಖ್ಯೆಯುಳ್ಳ ದುಕಾ೯ಗಳು ಅನ್ಯತ್ರ ಇಡಬೇಕೆಂದು ಕೋರಲಿಕ್ಕೆ ಮಾತ್ರ ಅಧಿಕಾರ ಉಂಟಾಗಿರತಕ್ಕದ್ದು. ಅನ್ಯಥಾ ಸದ್ಯಸ್ಥಾನದ ಜರೂರೀಯಾತ ವಿಷಯಗಳಿಂದ, ಹಾಗೆ ನಿಷ್ಕರ್ಷಿಸಲ್ಪಟ್ಟ ದುಕಾ೯ಗಳಿಗೆ ಒಳಪಟ್ಟು ಯೆಷ್ಟು ದುಕಾ೯ಗಳನ್ನಾಗಲಿ ಮುಚ್ಚಿಬಿಡಬೇಕಾಗಿದ್ದರೆ ಹಾಗೆ ಮುಚಲ್ಪಟ್ಟ ಸಂಖ್ಯೆಗೆ, ಸದರೀ ಸಾಲ್‌ನಲ್ಲಿ ಲೈಸೆನ್ಸ್ ಕೊಡಲ್ಪಟ್ಟ ಅಂಗಡಿಗಳಿಗೆ ಕೊಡಲ್ಪಡತಕ್ಕ ಕೌಲ್ ಮೊಬಲಗಿನ ಮೇಲೆ, ಇಜಾರೇದಾರನಿಗೆ ದುಕಾ೯ಗಳ ಸಂಖ್ಯೆಯನ್ನು ಹಾಗೆ ಕಮ್ಮಿ ಮಾಡಿದ್ದರಿಂದ ನುಕ್ಸಾನಪಟ್ಟಿದ್ದಾನೆಂದು ರುಜುವಾದರೆ, ದಾವಾಷಾಯಿ ಪ್ರಕಾರ ಈಡು ಮೊಬಲಗ್ ಕೊಡಲ್ಪಡತಕ್ಕದ್ದೇ ಹೊರತು ಅನ್ಯಥಾ ಕೂಡದು.

X. ಇಜಾರೇದಾರನು, ತನ್ನ ಒಟ್ಟು ಕೋಠಿಯಲ್ಲಿ ನಡೆಯುವ ಬಿಕರೀಗಳ ಬಾಬತ್ತು, ಸಾಚಾ ಆಗಿಯೂ, ಕರಾರ್‌ವಾಕಾ ಆಗಿಯೂ ಇರುವ ಲೆಕ್ಕವನ್ನು ಡೆಪ್ಯೂಟಿಕಮ್ಮಿಷನರವರಿಗೆ ಅಥವಾ ಸಂದರ್ಭಾನುಸಾರ ಸಬ ಡಿವೀಜ್ ಆಫೀಸರರಿಗೆ ಕೇಳಿದಾಗ ತಯಾರ್ ಮಾಡಿಕೊಡಬೇಕಾಗಿರುತ್ತೆ ಮತ್ತು ಸುಂಕದ ಇಲಾಖಾ ಆಫಿಸರ್‌ಗಳಿಗೆ, ಇಜಾರೇ ದಾರನಿಂದ ಇಡಲ್ಪಡುವ ತಮಾಂ ಲೆಕ್ಕಗಳನ್ನೂ ನೋಡಲಿಕ್ಕೆ ಯಾವಾಗಲೂ, ಯೆಲ್ಲಸಮಯಗಳಲ್ಲಿಯೂ ಅವಕಾಶ ಕೊಡತಕ್ಕದ್ದು. ಅಂತಾ ಲೆಕ್ಕಗಳು ಸಾಚಾ ಆಗಿಯೂ. ಕರಾರ್‌ವಾಕಾ ಆಗಿಯೂ ಮತ್ತು ಡೆಪ್ಯೂಟಿ ಕಮ್ಮಿಷನರು ಯಾ ಸಂದರ್ಭಾನುಸಾರ ಸಬ ಡಿವೀಜ್ ಆಫೀಸರರು ಆಗಿಂದಾಗ್ಯೆ ಮುಂಜೂರ್ ಮಾಡಬಹುದಾದ ನಮೂನೇಗಳಲ್ಲಿಯೂ ಇರತಕ್ಕವು.

XI. ಒಟ್ಟು ಕೋಠಿಗಳಲ್ಲಿ ಇಜಾರೇದಾರನ ಮುತಾಲೀಕನಾಗಲಿ, ನೌಕರನಾಗಲಿ, ಕೆಟ್ಟನಡತೆಗೂ ಅಕ್ರಮಗಳಾದ ಕೃತಗಳಿಗೂ, ಅವಕಾಶ ಕೊಡಕೂಡದು, ಅವರುಗಳಿಗೆ, ಕರಾರ್‌ವಾಕಾ ತಾ್ಸುಗಳನ್ನೂ ತೂಕಗಳನ್ನೂ ಕೊಡತಕ್ಕದ್ದು. ತೂಕಗಳಿಗೆ ಕ್ರಮವಾಗಿ ಗವರ್ಮೆಂಟಿನಿಂದ ಮುದ್ರೆಹಾಕಲ್ಪಡತಕ್ಕದ್ದು. ಮತ್ತು, ಅಂತಾ ನೌಕರರೆಲ್ಲರೂ, ಇಜಾರೇದಾರನಿಂದ ಕರಾರಿಗೆ ರುಜು ಮಾಡಲ್ಪಟ್ಟ 15 ದಿನಗಳ ತರುವಾಯ ಇಜಾರೇದಾರನಿಗೂ, ಗವರ್ಮೆಂಟಿನವರಿಗೂ, ನಡೆದಿರುವ ಬಡಂಬಡಿಕೆಗಳ ತಾತ್ಪರ್ಯಕ್ಕೂ ಅರ್ಥಕ್ಕೂ ಜರೀಯೊಳಗಿರುವ ಕಾರ್ನೂಗಳಿಗೂ, ನಿಬಂಧನೆಗಳಿಗೂ, ಬದ್ಧರಾಗಿ ನಡೆದುಕೊಳ್ಳುವದಾಗಿ ಮುಚ್ಚಲಿಕೆ ಬರೆದುಕೊಡತಕ್ಕದ್ದು; ಅಂತಾ ಮುಚ್ಚಲಿಕೆಗಳು ತಪ್ಪದೆ ಸದರೀ ಮೂಹೆ 20ನೇ ತಾರೀಖಿನೊಳಗಾಗಿ, ಡೆಪ್ಯೂಟಿ ಕಮ್ಮಿಷನರ ಅಥವಾ ಸಂದರ್ಭಾನುಸಾರ ಸಬ ಡಿವೀಜ್ ಆಫೀಸರರ ಆಫೀಸ್‌ನಲ್ಲಿ ಇಡಲ್ಪಡತಕ್ಕದ್ದು.

XII. ಮೇಲೆಕಂಡ ಷರತ್‌ಗಳ ಯಾವ ಉಲ್ಲಂಘನೆಗಾಗಲಿ, ಇಜಾರೇದಾರನು ಡೆಪ್ಯೂಟಿ ಕಮ್ಮಿಷನರವರ ಯಾ ಸಂದರ್ಭಾನುಸಾರ ಸಬ ಡಿವೀಜ್ ಆಫಿಸರರ ಯಚ್ಛಾ್ಯರೀ ಮೇಲೆ ವಸೂಲ್ ಮಾಡಲ್ಪಡತಕ್ಕ 100 ರೂಪಾಯಿಗಳಿಗೆ ಮಿಾರದ ಒಂದು ಜರ್ಮಾನೆಗೂ, ಜರೂರೆಂದು ಭಾವಿಸಿದರೆ, ಗವರ್ಮೆಂಟಿನವರ ಮಂಜೂರಾತೀನಿೇ ಆತನ ಇಜಾರೇಯನ್ನು ಕಳಕೊಳ್ಳುವದಕ್ಕೂ, ಅಥವಾ ಕಂಟ್ರಾಕ್ಟಿನ ಉಲ್ಲಂಘನೆಗಾಗಿ ಅಥವಾ ಗವರ್ಮೆಂಟಿನಿಂದ ಕಲ್ಪಿಸಲ್ಪಟ್ಟ ರೂಲ್ಸಿನ ಉಲ್ಲಂಘನೆಗಾಗಿ ಹಾಲೀ ಜಾರೀಯಿರುವ ಕಾರ್ನೂಗಳಿಂದ ವಿಧಿಸಲ್ಪಟ್ಟ ಮತ್ತಾವ ದಂಡಗಳಿಗಾಗಲಿ ವಳಪಡತಕ್ಕದ್ದು; ಯಿನ್ಯಾವ ತಪಸೀಲ್‌ಗಳನ್ನಾದರೂ, ಡೆಪ್ಯೂಟಿ ಕಮ್ಮಿಷನರವರ ಆಫಿಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

XIII. ಕಂಟ್ರಾಕ್ಟುದಾರನು, ಗವರ್ಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ನಿಬಂಧನೆಗಳಿಗಾಗಲಿ ಅನುಗುಣವಾಗಿ ನಡಿಯಬೇಕಾಗಿರುತ್ತೆ.

ತಾರೀಖು 21ನೇ ಮಾರ್ಚೀ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರೆಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಮೋಜೇಬ ಹುಕ್ಕುಂ,

ಆರ್. ವಿಜಯಾಂದ್ರರಾವ್,

ಸೆಕ್ರೆಟೇರಿ.